ಧ್ಯಾನ, ಹಕ್ಕಿಧ್ಯಾನವೂ ಆಗಿ ಬದುಕಿಗೆ ಬೇರೆ ಆಯಾಮಗಳನ್ನು ಕಟ್ಟಿಕೊಟ್ಟಿತು.

ಹೊರರಾಜ್ಯಗಳಲ್ಲಿ ದಿನಗಟ್ಟಲೆ ಫೋಟೊ ಟೂರುಗಳನ್ನು ಮಾಡಿದಾಗ ಹಕ್ಕಿ ಚಿತ್ರಗ್ರಾಹಕರ ಜೊತೆ ಇದ್ದೇ ಇರುವುದರಿಂದ ಒಬ್ಬ ಮಹಿಳೆಯಾಗಿ ತೀರಾ ಹೆಚ್ಚೇನೋ ಸಮಸ್ಯೆ ಎದುರಿಸಲಿಲ್ಲ ಎಂದರೂ ಸಣ್ಣಪುಟ್ಟ ಇಕ್ಕಟ್ಟಿದ್ದೇ ಇರುವುದು ಸಹಜ. ಅದರಲ್ಲೂ ಕೆಲವು ಸನ್ನಿವೇಶಗಳು ಮಹಿಳೆಯರಿಗೆ ಒತ್ತಡವನ್ನೂ ಸೃಷ್ಟಿಸಿಬಿಡುತ್ತವೆ. ಆದರೆ ನಮ್ಮ ಗುರಿಯ ಕಡೆಗೆ ಗಮನ ಹೆಚ್ಚು ಇದ್ದಾಗ ಅಡಚಣೆಗಳು ಅಡ್ಡಿಯಾಗಬೇಕಿಲ್ಲ. ಕೆಲವು ಟೂರುಗಳಲ್ಲಿ ಕೇವಲ ನಾನೊಬ್ಬಳೇ ಮಹಿಳೆ ಇದ್ದದ್ದು ಉಂಟು. ಎಲ್ಲರೂ ಬಹಳ ಗೌರವಯುತವಾಗಿ ನಡೆಸಿಕೊಂಡಿದ್ದಾರೆ. ಅದರಲ್ಲೂ ಅರವತ್ತು ದಾಟಿದ, ಕಾಲುನೋವಿನಿಂದ ಬಳಲಿದರೂ ಹಕ್ಕಿ ಬೆನ್ನು ಬಿಡದ ನನ್ನ ಆಸಕ್ತಿಗೆ ಆಶ್ಚರ್ಯ ವ್ಯಕ್ತಪಡಿಸುತ್ತಿದ್ದರು.

ಮೂವತ್ತೈದು ವರ್ಷ ಮಕ್ಕಳ ಜೊತೆಗಿನ ಒಡನಾಟದಿಂದಾಗಿ ಬಹುತೇಕ ವಿದ್ಯಾರ್ಥಿ ಮಕ್ಕಳು 'ಅಮ್ಮಾ' ಎಂದು ಅಕ್ಕರೆಯಿಂದ ಕರೆದು ಪ್ರೀತಿಸಿದ ಕಾರಣದಿಂದ ತಾಯ್ತನದ ಅಂತಃಕರಣದ ವಿಶ್ವ ವಿಶಾಲವಾಯಿತು. ಹಕ್ಕಿಯ ಜೊತೆಯಲ್ಲೂ ಆ ತಾಯ್ತನದ ಸಂಬಂಧವೇ ಬೆಳೆದು ಹಕ್ಕಿಗಳು ಮಕ್ಕಳೇ ಆದವು. ಅವುಗಳ ಸಹಜವಾದ ಭಯ, ಆತಂಕ, ಪ್ರೀತಿ, ಮುಗ್ಧತೆ ಮುಂತಾದ ಭಾವಗಳ ಸೂಕ್ಷ್ಮತೆ ಗಮನಿಸುತ್ತಾ ಹಕ್ಕಿಗಳ ಜೊತೆಗೆ ಸಂವಾದಿಸುವ ಮನಃಸ್ಥಿತಿಯಲ್ಲಿ ಎಷ್ಟೋ ಸಲ ಹಕ್ಕಿಗಳು ಎದುರಾಗಿವೆ. ಹಾಗಾಗಿ ಹಕ್ಕಿಗಳಿಗೆ ಪಾಠ ಕಲಿಸುವ, ಕಲಿಯುವ ಶಾಲೆಯೊಂದರ ಕಲ್ಪನೆಯ ಲೋಕ ಸೃಷ್ಟಿಸಿಕೊಂಡು ಹಕ್ಕಿಗಳ ಜೊತೆ ಹಾಜರಾತಿ, ಕ್ಲಾಸಿನ ಪರಿಕಲ್ಪನೆಯ ಪುಸ್ತಕವೊಂದನ್ನು ಸಿದ್ಧಪಡಿಸುತ್ತಿದ್ದೇನೆ. ಸಾಹಿತ್ಯದ ಸಾಂಗತ್ಯದಿಂದಾಗಿ ಹಕ್ಕಿಗಳೊಡನೆ ನನ್ನ ಸಂಬಂಧ ಕೇವಲ ಔಪಚಾರಿಕವಾಗಿ ಉಳಿದಿಲ್ಲ. ಕಂಡ ಹಕ್ಕಿಯ ನೋಟಕ್ಕೆ ಓದಿದ ಸಾಹಿತ್ಯ, ಬದುಕಿನ ಬಾಳಿನ ಅನುಭವ ಎರಡೂ ಬೆರೆತು ಬೇರೆಯೇ ಆದ ಹೊಸ ನೋಟ ಸಿಕ್ಕಿದೆ.

ಹಕ್ಕಿಗಳ ಲೋಕದಲ್ಲಿ ಹೆಣ್ಣನ್ನು ಒಲಿಸಿಕೊಳ್ಳುವ ಗಂಡು, ಮರಿಗಳ ಪಾಲನೆ ಪೋಷಣೆಯಲ್ಲಿ ಸಮಾನ ಜವಾಬ್ದಾರಿಯಿಂದ ನಡೆದುಕೊಳ್ಳುವುದನ್ನು ಕಂಡಾಗ, ಮಾನವರು ನಿಸರ್ಗದ ಈ ಸಹಜೀವಿಗಳಿಂದ ಕಲಿಯಬೇಕಾದ ಹಲವು ಅಂಶಗಳಿವೆ ಎನ್ನುವುದಂತೂ ನಿಜ.



1918 ಜನಪ್ರಿಯ ಕ್ಯಾಮೆರಾ ತಯಾರಿಕಾ ಕಂಪನಿ ಕೊಡಾಕ್ ಅವರು ರೂಪಿಸಿದ 'ಪ್ರೂವ್ ಇಟ್ ವಿದ್ ಅ ಕೊಡಾಕ್' ಎಂಬ ಜಾಹೀರಾತಿನಲ್ಲಿ ಮಹಿಳೆಯೇ ಕ್ಯಾಮೆರಾ ಹಿಡಿದಿದ್ದಳು!



ಭಾರತ ಫೋಟೊಜರ್ನಲಿಸಮ್‌ನಲ್ಲಿ ತಮ್ಮದೇ ಛಾಪು ಮೂಡಿಸಿದ ಹೋಮೈ ವ್ಯಾರಾವಾಲಾ

ಆರಂಭಗೊಂಡ 'ಪಿಕ್ಟೋರಿಯಲಿಸಮ್' ಚಿತ್ರ ಚಳವಳಿಗೆ ಆ ಚಿತ್ರಗಳೇ ಸ್ಫೂರ್ತಿಯಾದವು ಮತ್ತು ಆ ಚಳವಳಿಯ ನಂತರದಲ್ಲಿ ಜೂಲಿಯಾ ಛಾಯಾಚಿತ್ರಗಳು ವಿಶೇಷ ಮಾನ್ಯತೆಗೆ ಒಳಗಾದವು.

1860–70ರ ದಶಕದಲ್ಲಿ ಜಗತ್ತಿನ ವಿವಿಧ ದೇಶಗಳಲ್ಲಿ ಮಹಿಳೆಯರು ಸ್ವತಂತ್ರವಾಗಿ ಫೋಟೊ ಸ್ಟುಡಿಯೊವನ್ನು ಸ್ಥಾಪಿಸಿ ನಡೆಸಿಕೊಂಡು ಹೋಗುವಷ್ಟು ಛಾಯಾಗ್ರಹಣ ಕ್ಷೇತ್ರದಲ್ಲಿ ನೆಲೆಯೂರಿದ್ದರು.

'ಕಲಾತ್ಮಕ ಛಾಯಾಗ್ರಹಣ' ಎನ್ನುವ ಪರಿಕಲ್ಪನೆಯು 1980ರ ದಶಕದಲ್ಲಿ ಒಂದು ಕಲಾಚಳವಳಿಯ ರೂಪದಲ್ಲಿ ಪ್ರವಹಿಸಲು ಶುರುವಾಗಿತ್ತು. ಆ ಚಳವಳಿಯ ಮುಂಚೂಣಿಯಲ್ಲಿದ್ದ ಫೋಟೊಗ್ರಾಫರ್ ಮತ್ತು 'ಮಾಡರ್ನ್ ಆರ್ಟ್' ಪ್ರಚಾರಕ ಆಲ್‌ಫ್ರೆಡ್ ಸ್ಟಿಯೆಗ್‌ಲಿಟ್ಜ್, 'ಮಹಿಳೆಯರೂ ಈ ಚಳವಳಿಯ ಭಾಗವಾಗಬೇಕು' ಎಂದು ಬಯಸಿದ್ದ. ಬಯಸಿದ್ದಷ್ಟೇ ಅಲ್ಲ, ಫೋಟೊಗ್ರಫಿಯಲ್ಲಿ ಆಸಕ್ತಿ ಹೊಂದಿದ್ದ ಹಲವು ಮಹಿಳೆಯರನ್ನು ಚಳವಳಿಯಲ್ಲಿ ತೊಡಗಿಕೊಳ್ಳುವಂತೆ ಮಾಡಿದ್ದ.

ಕಾಲಕ್ರಮೇಣ 'ಮಹಿಳಾ ಫೋಟೊಗ್ರಫಿ', ಭಾವಚಿತ್ರ, ಭೂಚಿತ್ರ, ಸ್ಟ್ರೀಟ್‌ಫೋಟೊಗ್ರಫಿ– ಹೀಗೆ ಬೇರೆ ಬೇರೆ ಪ್ರಕಾರಗಳಿಗೂ ಹರಡತೊಡಗಿತು. ಫೋಟೊಜರ್ನಲಿಸಮ್ ಕ್ಷೇತ್ರದಲ್ಲಿ ಮಹಿಳೆ ಅಡಿಯಿಟ್ಟಿದ್ದು ಒಂದು ಐತಿಹಾಸಿಕ ತಿರುವು. ಆ ಪ್ರಯತ್ನಗಳು ನಡೆಯಲು ಶುರುವಾಗಿದ್ದು 1900ರ ಆಸುಪಾಸಿನಲ್ಲೇ ಆದರೂ ಪ್ರವರ್ಧಮಾನಕ್ಕೆ ಬಂದಿದ್ದು 1914ರಿಂದ 1918ರವರೆಗೆ ನಡೆದ ಮೊದಲನೇ ಮಹಾಯುದ್ಧದ ಸಂದರ್ಭದಲ್ಲಿ. ಜಗತ್ತಿನ ಗತಿಯನ್ನೇ ಬದಲಿಸಿದ ಮಹಾಯುದ್ಧ, ಫೋಟೊಗ್ರಫಿ ಪಥಕ್ಕೆ ಮಹಿಳೆಯ ಗಟ್ಟಿ ಚಹರೆಯನ್ನು ದಯಪಾಲಿಸಿದ್ದಂತೂ ಹೌದು.

## ಫೋಟೊಜರ್ನಲಿಸಮ್‌ನಲ್ಲಿ ಹೆಣ್ಣಿನ ಹೆಜ್ಜೆ

ಫೋಟೊಜರ್ನಲಿಸಮ್‌ನಲ್ಲಿ ಹೆಣ್ಣಿನ ಹೆಜ್ಜೆ ದೃಢವಾಗಿ ಮೂಡಲಾರಂಭಿಸಿದ್ದು 19ನೇ ಶತಮಾನದ ಅಂತ್ಯ ಮತ್ತು 20ನೇ ಶತಮಾನದ ಆರಂಭದ ದಿನಗಳಲ್ಲಿ. ಕೆನಡಾ ಸಂಜಾತೆ, ಅಮೆರಿಕ ನಿವಾಸಿಯಾಗಿದ್ದ ಜೆಸ್ಸಿ ಟಾರ್ಬಾಕ್ಸ್ ಅನ್ನು ಅಮೆರಿಕದ ಮೊದಲ ಫೋಟೊಜರ್ನಲಿಸ್ಟ್ ಎಂದು ಗುರ್ತಿಸಲಾಗುತ್ತದೆ. ಅವರು 1899ರಲ್ಲಿ 'ಬೋಸ್ಟನ್ ಪೋಸ್ಟ್' ಪತ್ರಿಕೆಗಾಗಿ ತೆಗೆದ ಮೆಸಾಚ್ಯುಸೆಟ್ಸ್ ರಾಜ್ಯ ಕಾರಾಗೃಹದ ಚಿತ್ರಗಳು ಸಾಕಷ್ಟು ಪ್ರಸಿದ್ಧಿ ಗಳಿಸಿದವು. ನಂತರ ಅವರನ್ನು 'ಬಫೆಲೊ ಎನ್‌ಕ್ವೈಯರ್' ಎಂಬ ಪತ್ರಿಕೆ ಛಾಯಾಗ್ರಾಹಕಿಯಾಗಿ ನೇಮಿಸಿಕೊಂಡಿತು. ನಂತರ 1902ರಲ್ಲಿ 'ದಿ ಕೊರಿಯರ್' ಎಂಬ ಪತ್ರಿಕೆಯಲ್ಲಿಯೂ ಅವರು ಛಾಯಾಗ್ರಾಹಕಿಯಾಗಿ ಕೆಲಸ ಮಾಡಿದರು. ಮಹಿಳೆಯರಿಗೆ ಸೀಮಿತ